ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ/42/ಜೈಅಯೋ/2014

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ : 26.06.2014

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

ಇವರಿಗೆ,

ಉಪ ನಿರ್ದೇಶಕರು,
ಖಜಾನೆ ಗಣಕಜಾಲ ಕೇಂದ್ರ,
ಮೊದಲನೇ ಮಹಡಿ, ಖನಿಜ ಭವನ,
ಬೆಂಗಳೂರು

ಮಾನ್ಯರೇ,

ವಿಷಯ : 2013–14ನೇ ಸಾಲಿನಲ್ಲಿ 2009–10ನೇ ಸಾಲಿನ ಕೇಂದ್ರ ಪುರಸ್ಕೃತ ಕಾರ್ಯಕ್ರಮವಾದ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ಬಿಡುಗಡೆಯಾದ ಕೇಂದ್ರ ಸರ್ಕಾರದ 2014–15ನೇ ಸಾಲಿಗೆ ಮರು ನವೀಕರಣಗೊಳಿಸಿ ಅನುದಾನವನ್ನು (Revalidate) ಮರು ಬಿಡುಗಡೆಗೊಳಿಸುವ ಬಗ್ಗೆ.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/42/ಜೈಅಯೋ/2013(ಪಿ)ಬೆಂಗಳೂರು, ದಿನಾಂಕ: 26.06.2014.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಹಾವೇರಿ ಜಿಲ್ಲೆಗೆ ರೂ.19.952ಲಕ್ಷ ಬಿಡುಗಡೆ ಮಾಡಲಾಗಿದೆ. ಆದರೆ 2014–15ನೇ ಸಾಲಿಗೆ ಹಾವೇರಿ ಜಿಲ್ಲೆಯ ಉಪ ಶೀರ್ಷಿಕೆ 463ರಲ್ಲಿ ರೂ.40.00ಲಕ್ಷ ಆಯವ್ಯಯ ಅನುದಾನವಿದ್ದು, ಇದರ ಮೂರನೇ ಒಂದು ಭಾಗ ಅಂದರೆ ರೂ.13.33ಲಕ್ಷ ಸದ್ಯಕ್ಕೆ ಅಪ್ ಲೋಡ್ ಮಾಡಲು ಅವಕಾಶವಿದೆಯೆಂದು ತಾವು ಸೂಚಿಸಿರುವುದರಿಂದ ರೂ.13.33ಲಕ್ಷಗಳಿಗೆ (ರೂ. ಹದಿಮೂರು ಲಕ್ಷದ ಮೂವತ್ತು ಮೂರು ಸಾವಿರಗಳು ಮಾತ್ರ) ಅಪಲೋಡ್ ಮಾಡಲು ಡಿಪಾರ್ಟ್‌ಮೆಂಟ್ ಅಲಾಟ್ ಡಿಪಾರ್ಟ್‌ಮೆಂಟ್ ಟೆಕ್ಸ್ಟ್ ಇದನ್ನು ಪೆನ್ ಡ್ರೈವ್‌ನಲ್ಲಿ ಕಳುಹಿಸಲಾಗಿದೆ.

ಉಲ್ಲೇಖಿತ ಸರ್ಕಾರಿ ಆದೇಶದ ಪ್ರಕಾರ ಉಳಿಕೆ ಅನುದಾನ ರೂ.6.622ಲಕ್ಷಗಳ ಅನುದಾನವನ್ನು ಪೂರ್ಣ ಆಯವ್ಯಯ ಅನುಮೋದನೆ ನಂತರ ಸಲ್ಲಿಸಲಾಗುವುದು.

ತಮ್ಮ ನಂಬುಗೆಯ,

(ಸಹಿ)

ಉಪ ನಿರ್ದೇಶಕರು (ಜೈವಾನಿಲ) ಗ್ರಾಮೂಸೌ–2,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು : ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ ಜಿಲ್ಲೆ – ಇವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.